**ದಿನಾಂಕ 15.12.2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು : ಶ್ರೀ ವಿ.ಎನ್. 1 ನೇ ಪ್ರತಿವಾದಿ ಪರ ವಕೀಲರಿಂದ**

ಸರ್ವೇ ನಂಬರ್ 117 ಮೊದಲು ಯಾವ ಸರ್ವೇ ನಂಬರ್ ಆಗಿತ್ತು ಗೊತ್ತಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣ 3 ಎಕರೆ 29 ಗುಂಟೆ. ದಾವಾ ಸ್ವತ್ತು ಮೊದಲು ತಾತ ಬಟ್ಟಾಚಾರ ರವರಿಗೆ ಸೇರಿದ್ದು ಎಂದು ನುಡಿಯುತ್ತಾರೆ. ಸದರಿ ತಾತ ಬಟ್ಟಾಚಾರ್ ರವರಿಗೆ ಸದರಿ ಸ್ವತ್ತು ಹೇಗೆ ಬಂದಿತು ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಸ್ವತ್ತು ಸರ್ಕಾರದ ಸ್ವತ್ತು ಎಂದರೆ ಗೊತ್ತಿಲ್ಲ. ಸರ್ವೇ ನಂಬರ್ 117 ಹಳೇಯ ಸರ್ವೇ ನಂಬರ್ 2/1, 2/3 ಮತ್ತು 1/10 ಆಗಿದ್ದವು ಎಂದರೆ ಗೊತ್ತಿಲ್ಲ. ಸರ್ವೇ ನಂಬರ್ 117ರ ಸ್ವತ್ತು ಪೋಡಿ ನಂತರ ಸರ್ವೇ ನಂಬರ್ 1/10ರ ವಿಸ್ತೀರ್ಣ 1 ಎಕರೆ 9 ಗುಂಟೆ, 2/1 ರ ವಿಸ್ತೀರ್ಣ 1 ಎಕರೆ 10 ಗುಂಟೆ ಮತ್ತು ಸರ್ವೇ ನಂಬರ್ 2/3 ರ ವಿಸ್ತೀರ್ಣ 1 ಎಕರೆ 8 ಗುಂಟೆ ಆಗಿವೆ ಎಂದರೆ ಗೊತ್ತಿಲ್ಲ.

ಸರ್ವೇ ನಂಬರ್ 2/3 ರ ವಿಸ್ತೀರ್ಣ 1 ಎಕರೆ 8 ಗುಂಟೆ ಸ್ವತ್ತು ಯಗುವಂಟಿ ಮುದ್ದಣ್ಣರವರಿಗೆ ಮಂಜೂರಾಗಿದೆ ಎಂದರೆ ಗೊತ್ತಿಲ್ಲ. ಸದರಿ ಯಗುವಂಟಿ ಮುದ್ದಣ್ಣರವರು ಸರ್ವೇ ನಂಬರ್ 2/3 ರ ವಿಸ್ತೀರ್ಣ 1 ಎಕರೆ 8 ಗುಂಟೆ ಸ್ವತ್ತನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಸ್ವತ್ತಿನಲ್ಲಿ 1 ನೇ ಪ್ರತಿವಾದಿ ಸ್ವಾಧೀನದಲ್ಲಿಸಾದ್ದರೆ ಎಂದರೆ ಸಾಕ್ಷಿಯು ಆ ಸ್ವತ್ತಿನಲ್ಲಿ ಪ್ರತಿವಾದಿಗಳು ಮತ್ತು ನಾನು ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ.

ಸರ್ವೇ ನಂಬರ್ 2/1, 2/3 ಮತ್ತು 1/10 ಸ್ವತ್ತುಗಳು ಸೇರಿ ಸರ್ವೇ ನಂಬರ್ 117 ಆಗಿದೆ ಎಂದರೆ ಸರಿ. ದಾವಾ ಸ್ವತ್ತು ನಮ್ಮ ಮಾರಾಟಗಾರರಿಗೆ ಮಂಜೂರಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಮಾರಾಟ ಮಾಡುವ ಮೊದಲು ಅಥವಾ ಆ ನಂತರ ಸರ್ವೇ ಮಾಡಿಸಿಲ್ಲ.

ದಾವಾ ಸ್ವತ್ತು ನನ್ನ ಹೆಸರಿಗೆ ಖಾತೆ ಬದಲಾವಣೆ ಕೋರಿ ಕಂದಾಯ ಪ್ರಾಧಿಕಾರಕ್ಕೆ ಅರ್ಜಿ ನೀಡಿದ್ದೇನೆ. ಕಂದಾಯ ಅಧಿಕಾರಿಗಳು ಹಿಂಬರಹ ನೀಡಿದ್ದು, ಅದನ್ನು ಉಪ–ವಿಭಾಗಾಧಿಕಾರಿಗಳ ನ್ಯಾಯಾಲಯಕ್ಕೆ ನೀಡಿದ್ದೇನೆ. ದಾವಾ ಸ್ವತ್ತು ಈ ಮೊದಲು ಜೋಡಿ ಇನಾಂತಿ ಸ್ವತ್ತು ಎಂದರೆ ಸರಿ. ನಮ್ಮ ಮಾರಾಟಗಾರರಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕಿರಲಿಲ್ಲ, ಹಾಗಾಗಿ ನಮಗೆ ಯಾವುದೇ ಖಾತೆಯಾಗಿಲ್ಲ ಎಂದರೆ ಸರಿಯಲ್ಲ. ನಮ್ಮ ಮಾರಾಟಗಾರರಿಗೆ ಸರ್ಕಾರದಿಂದ ಮಂಜಾರಾಗಿರುವ ಬಗ್ಗೆ ಯಾವುದೇ ಹಕ್ಕು ದಾಖಲೆಗಳು ಇರಲಿಲ್ಲ ಎಂದರೆ ಸರಿ, ಸಾಕ್ಷಿಯು ಪಹಣಿ ಮಾತ್ರ ಇದೆ ಎಂದು ನುಡಿಯುತ್ತಾರೆ. ಹಾಗಾಗಿ ನನ್ನ ಮಾರಾಟಗಾರರಿಗೆ ದಾವಾ ಸ್ವತ್ತನ್ನು ನಮಗೆ ಮಾರಾಟ ಮಾಡುವ ಹಕ್ಕಿರಲಿಲ್ಲ ಎಂದರೆ ಪಹಣಿ, ಮ್ಯೂಟೇಶನ್ ಇದೆ ಎಂದು ನುಡಿಯುತ್ತಾರೆ.

ಸರ್ವೇ ನಂಬರ್ 2/3 ರ ವಿಸ್ತೀರ್ಣ 1 ಎಕರೆ 8 ಗುಂಟೆ ಸ್ವತ್ತಿನಲ್ಲಿ 1 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.